**ಒ.ಎಸ್.ನಂಬ್ರ: 214/2010 ಡಿ.ಡಬ್ಲ್ಯೂ : 1**

ದಿನಾಂಕ: 08-11-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಮುಂದುವರಿದ ಪಾಟಿ ಸವಾಲು: ಶ್ರೀ ಎಮ್.ಜೆ.ಎಸ್. ವಕೀಲರಿಂದ**

ನನ್ನ ತಂದೆಯವರು 1 ಮತ್ತು 2 ನೇ ಪ್ರತಿವಾದಿಯ ಜಿ.ಪಿ.ಎ ದಾರಕರಾಗಿ 1999 ರ ನಂತರ ಯಾವ ಯಾವ ದಾಖಲೆಗಳನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಅವುಗಳ ಮಾಹಿತಿ ನನಗೆ ಇರುತ್ತದೆ. ನನ್ನ ತಂದೆಯ ಜಿ.ಪಿ.ಎ ಮೂಲಕ ವೆಂಕಟಕೃಷ್ಣ ಮಕ್ಕಿತಾಯಿರವರಿಗೆ ಒಂದು ದಾಖಲೆಯನ್ನು ಮಾಡಿಕೊಟ್ಟಿರುತ್ತಾರೆ. ಸದ್ರಿ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ನನ್ನ ತಂದೆಯವರು ಮಾಡಿಕೊಟ್ಟಿರುವುದಿಲ್ಲ. 1 ನೇ ಪ್ರತಿವಾದಿಯು 1995 ರಲ್ಲಿ ನನ್ನ ತಂದೆಗೆ ಜಿ.ಪಿ.ಎ ಕೊಟ್ಟಿರುತ್ತಾರೆ. 2 ನೇ ಪ್ರತಿವಾದಿಯು 1980 ರಲ್ಲಿ ನನ್ನ ತಂದೆಗೆ ಜಿ.ಪಿ.ಎ ಬರೆದುಕೊಟ್ಟಿರುತ್ತಾರೆ. ನನ್ನ ತಂದೆ ಜಿ.ಪಿ.ಎ ದಾರಕನಾಗಿ ಮಾಡಿದ ವ್ಯವಹಾರಗಳ ಬಗ್ಗೆ ನನಗ್ಗಿಂತಲೂ ಪ್ರತಿವಾದಿ 1 ಮತ್ತು 2 ರವರಿಗೆ ಹೆಚ್ಚಿನ ಮಾಹಿತಿ ಇದೆ ಎಂದರೆ ಸರಿ. ನನ್ನ ತಂ ದೆಯು ಪ್ರತಿವಾದಿ 1 ಮತ್ತು 2 ರವರ ಜಿ.ಪಿ.ಎ ದಾರಕನಾಗಿ ವಾದಿಯ ಜೊತೆಯು ವ್ಯವಹಾರ ಮಾಡಿರುತ್ತಾರೆ ಎಂದರೆ ಸರಿ. ಆ ವ್ಯವಹಾರವು ತೆಕ್ಕಟ್ಟೆ ಗ್ರಾಮದ ಆಸ್ತಿಗಳ ಕುರಿತು ಮಾಡಿದ್ದಾಗಿರುತ್ತದೆ ಎಂದರೆ ಸರಿ. ಪ್ರತಿವಾದಿ 1 ಮತ್ತು 2 ರವರ ಸಂಪೂರ್ಣ ಅನುಮತಿಯೊಂದಿಗೆ ನನ್ನ ತಂದೆಯು ವಾದಿಯ ಜೊತಗೆ ವ್ಯವಹಾರ ಮಾಡಿರುತ್ತಾರೆ ಎಂದರೆ ಸರಿ. ಆ ರೀತಿ ವ್ಯವಹಾರ ಮಾಡಿದ ಬಗ್ಗೆ ನನ್ನ ತಂದೆ-ತಾಯಿ ಎಲ್ಲರಿಗೂ ವಿಷಯ ತಿಳಿಸಿರುತ್ತಾರೆ ಎಂದರೆ ಸರಿ. ವಾದಿಯು ನನ್ನ ತಂದೆ-ತಾಯಿಯ ಜೊತೆ ವ್ಯವಹಾರ ಮಾಡಿರುವ ಬಗ್ಗೆ ನಾನು ನನ್ನ ವಕೀಲರಿಗೆ ಲಿಖಿತ ಉದಾಹರಣೆ ಹಾಕುವಾಗ ಮತ್ತು ಮುಖ್ಯ ವಿಚಾರಣೆ ಸಲ್ಲಿಸುವಾಗ ಹೇಳಿರುತ್ತೇನೆ.

ನನ್ನ ತಂದೆ-ತಾಯಿ ವಾದಿಗೆ ನಿ.ಪಿ.11 ರಂತೆ ನೋಂದಾಯಿತ ಕ್ರಯ ಪತ್ರಮಾಡಿಕೊಟ್ಟ ಬಗ್ಗೆ ನನಗೆ ತಿಳಿದಿರುತ್ತದೆ. ನಿ.ಪಿ.11 ರ ಕ್ರಯ ಪತ್ರದಂತೆ ವಾದಿ ಮತ್ತು ನನ್ನ ತಂದೆ-ತಾಯಿಯು ಮಧ್ಯೆ 2003 ರಲ್ಲಿ ಮಾತುಕತೆಯಾಗಿರುತ್ತದೆ. ವಾದಿಯಿಂದ ನನ್ನ ತಂದೆ-ತಾಯಿ ಆಸ್ತಿ ಮಾರಾಟದ ಹಣ ಪಡೆದಿರುವ ಬಗ್ಗೆ ನನಗೆ ಗೊತ್ತಿರುತ್ತದೆ. ವಾದಿಯವರಿಂದ ಪಡೆದ ಕ್ರಯ ಪತ್ರದ ಹಣವನ್ನು 1 ಮತ್ತು 2 ನೇ ಪ್ರತಿವಾದಿಯರು ಪಡದುಕೊಂಡಿರುತ್ತಾರೆ ಎಂದರೆ ಸರಿ. ನಿ.ಪಿ.11 ರ ಕ್ರಯ ಪತ್ರ ಆಗುವ ಪೂರ್ವದಲ್ಲಿ ನಡೆದ ಮಾತುಕತೆಯಲ್ಲಿ ನೇರವಾಗಿ ಬಾಗಿಯಾಗಿರುವುದಿಲ್ಲ ಆದರೆ ಮಾತುಕತೆಯ ಸಂಪೂರ್ಣ ಮಾಹಿತಿಯನ್ನು ನನಗೆ ನನ್ನ ತಂದೆ-ತಾಯಿ ನೀಡಿರುತ್ತಾರೆ. ಆ ಸಮಯದಲ್ಲಿ ನನ್ನ ತಂದೆ-ತಾಯಿಯ ಜೊತೆ ವಾಸ್ತವ್ಯ ಇದ್ದಿರುವುದು 1 ನೇ ಪ್ರತಿವಾದಿ ಎಂದರೆ ಸರಿ. ದಾವಾ ಆಸ್ತಿಯ ಕುರಿತು 2003 ನೇ ಇಸವಿಯಲ್ಲಿ ವಾದಿ ಮತ್ತು ನನ್ನ ತಂದೆ-ತಾಯಿಯ ಜೊತೆ ಮಾತುಕತೆಯಾಗುವ ಸಮಯದಲ್ಲಿ ದಾವಾ ಆಸ್ತಿಯಲ್ಲಿ ಹಕ್ಕಿದವರು 1 ಮತ್ತು 2 ನೇ ಪ್ರತಿವಾದಿಯರು ಮತ್ತು ನನ್ನ ತಾಯಿಗೆ ಮಾತ್ರ ಹಕ್ಕು ಇತ್ತು ಎಂದರೆ 2007 ರಲ್ಲಿ ನನ್ನ ತಾಯಿ ತೀರಿಕೊಂಡ ನಂತರ ನನಗೂ ಹಕ್ಕು ಬಂದಿರುತ್ತದೆ. 2003 ರಲ್ಲಿ ದಾವಾ ಆಸ್ತಿಗೆ ನಾನು ಹಕ್ಕುದಾರನಾರದೆ ಇರುವುದರಿಂದ ನನ್ನ ತಂದೆ-ತಾಯಿಯವರು ಯಾವುದೆ ಮಾಹಿತಿ ನೀಡಿರುತ್ತಿರಲಿಲ್ಲ ಹಾಗೂ ನಾನು ಪಡೆದಿರುತ್ತಿರಲಿಲ್ಲ ಎಂದರೆ ಸರಿಯಲ್ಲ.

ನಿ.ಪಿ.6 ಮತ್ತು 11 ರ ವ್ಯವಹಾರದ ಬಗ್ಗೆ 1 ಮತ್ತು 2 ನೇ ಪ್ರತಿವಾದಿಯರಿಗೆ ಮಾತ್ರ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರಿಗೆ ನಿ.ಪಿ.6 ಮತ್ತು 11 ರ ವ್ಯವಹಾರದ ಬಗ್ಗೆ ನಿಜ ಸಂಗತಿ ಗೊತ್ತಿದ್ದು, ಸತ್ಯವನ್ನು ಮರೆಮಾಚುವ ಉದ್ದೇಶದಿಂದ ಅವರು ಸಾಕ್ಷೀ ನೀಡಲು ಬರುತ್ತಿಲ್ಲ ಎಂದರೆ ಸರಿಯಲ್ಲ. ನಿ.ಪಿ.6 ಮತ್ತು 11 ರಲ್ಲಿ ಇರುವ ತನ್ನ ತಂದೆ -ತಾಯಿಗಳ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಆಂಗ್ಲ ಭಾಷೆಯಲ್ಲಿರುವ ಸಹಿ ತನ್ನ ತಂದೆಯ ಸಹಿ ಎಂದು , ಕನ್ನಡ ಭಾಷೆಯಲ್ಲಿರುವ ಸಹಿ ತನ್ನ ತಾಯಿಯದ್ದು ಎಂದು ಗುರುತಿಸಿರುತ್ತಾರೆ. ನಿ.ಪಿ.

ನನ್ನ ತಂದೆ-ತಾಯಿಯ ಸಹಿ ಇರುವ ಬೇರೆ ದಾಖಲೆಗಳು ಇರುತ್ತವೆ. ಅವುಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಪ್ರತಿವಾದಿ 1 ಮತ್ತು 2 ಹಾಗೂ ನನ್ನ ತಾಯಿಯವರು ಬೆಂಗಳೂರಿನಲ್ಲಿ ವಾಸವಾಗಿರುವುದರಿಂದ ತೆಕ್ಕಟ್ಟೆ ಗ್ರಾಮದ ಆಸ್ತಿಗಳನ್ನು ಮಾರಾಟ ಮಾಡಲು ಇಚ್ಛಿಸಿದ್ದರೂ ಎಂದರೆ ಸರಿ. ದಾವಾ ಆಸ್ತಿಗಳು ವಾದಿಗೆ ಅನುಕೂಲವಾಗಿದ್ದವು ಎಂದರೆ ಸರಿ. ಪ್ರತಿವಾದಿ 1 ಮತ್ತು 2 ಹಾಗೂ ನನ್ನ ತಾಯಿ ದಾವಾ ಆಸ್ತಿಗಳ ಮಾರಾಟ ಮಾಡುವ ವಿಷಯ ವಾದಿಯ ಗಮನಕ್ಕೆ ಬಂದಿತ್ತು ಎಂದರೆ ಸರಿ. ಆ ಕಾರಣ ವಾದಿಯು ನನ್ನ ತಂದೆ-ತಾಯಿಯ ಬಳಿ ದಾವಾ ಆಸ್ತಿಯನ್ನು ಖರೀದಿಸುತ್ತೇನೆ ಎಂದು ಹೇಳಿರುತ್ತಾನೆ ಎಂದರೆ ಸರಿ. ನನ್ನ ಪ್ರಕಾರ ದಾವಾ ಆಸ್ತಿಗಳಲ್ಲಿ ಬಿ ಶೆಡ್ಯೂಲ್ ಆಸ್ತಿಗಳ ಕ್ರಯ ಪತ್ರವಾಗಿರುತ್ತದೆ , ಎ ಶೆಡ್ಯೂಲ್ ಆಸ್ತಿಗಳ ಯಾವುದೇ ಕ್ರಯ ಪತ್ರವಾಗಿರುವುದಿಲ್ಲ. ದಾವಾ ಎ ಶೆಡ್ಯೂಲ್ ಆಸ್ತಿ ವಾದಿಯ ಮನೆಯ ಪಶ್ಚಿಮ ದಿಕ್ಕಿಗೆ ತಾಗಿಕೊಂಡಿರುವ ಮನೆಅಡಿ ಸ್ಥಳ ಎಂದರೆ ಸರಿ. ಮೂಲತ ಸದ್ರಿ ದಾವಾ ಎ ಶೆಡ್ಯೂಲ್ ಆಸ್ತಿ ಮತ್ತು ವಾದಿಯ ಮನೆಅಡಿ ಸ್ಥಳ ನನ್ನ ತಾಯಿ ಮತ್ತು ವಾದಿ ಹಿರಿಯರ ಸ್ಥಳ ಆಗಿರುತ್ತದೆ ಎಂದರೆ ಸರಿ. ವಾದಿಯ ಮನೆಅಡಿ ಸ್ಥಳದಲ್ಲಿ ಸಂಗ್ರಹವಾಗುವ ಮಳೆ ನೀರು ಇತ್ಯಾದಿ ದಾವಾ ಎ ಶೆಡ್ಯೂಲ್ ಆಸ್ತಿ ಮೂಲಕ ಹೋಗುತ್ತದೆ ಎಂದರೆ ಸರಿ. ನನ್ನ ತಂದೆ-ತಾಯಿ ಮತ್ತು 1 ಮತ್ತು 2 ನೇ ಪ್ರತಿವಾದಿಯರು ಬೇರೆಯವರಿಗೆ ಮಾರಾಟ ಮಾಡಿದ್ದರೆ ತನಗೆ ತೊಂದರೆಯಾಗುತ್ತದೆ ಎಂದು ವಾದಿಯು ದಾವಾ ಎ ಮತ್ತು ಬಿ ಶೆಡ್ಯೂಲ್ ಆಸ್ತಿಯನ್ನು ಕ್ರಯ ಮಾಡಲು ಇಚ್ಛೆ ವ್ಯಕ್ತಪಡಿಸಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರ ನಿ.ಪಿ.6 ರಂತೆ ಕ್ರಯ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.6 ರಂತೆ ಕ್ರಯ ಕರಾರು ಪತ್ರ ಮಾಡಿಕೊಂಡ ನಂತರ ನನ್ನ ತಂದೆ-ತಾಯಿಯವರು ಪ್ರತಿವಾದಿ 1 ಮತ್ತು 2 ರವರಿಗೆ ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.6 ರ ಕ್ರಯ ಪತ್ರದ ಪ್ರಕಾರ ನನ್ನ ತಾಯಿ ಮತ್ತು 1 ಮತ್ತು 2 ನೇ ಪ್ರತಿವಾದಿಯರು ದಾವಾ ಎ ಶೆಡ್ಯೂಲ್ ಆಸ್ತಿಯ ಕುರಿತು ಶುದ್ಧ ಕ್ರಯ ಪತ್ರ ಬರೆದುಕೊಡಲು ಬದ್ದರು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಾಯಿಯ ವಾರಸುದಾರರಾಗಿ ಪ್ರತಿವಾದಿಯರು ದಾವಾ ಎ ಶೆಡ್ಯೂಲ್ ಆಸ್ತಿಯ ಕುರಿತು ಶುದ್ಧ ಕ್ರಯ ಪತ್ರ ಬರೆದುಕೊಡಲು ಬದ್ದರು ಎಂದರೆ ಸರಿಯಲ್ಲ. ನಿ.ಪಿ.6 ರ ಕ್ರಯ ಪತ್ರದಂತೆ , ನಿ.ಪಿ.11 ರ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.6 ಷರತ್ತಿನಂತೆ ವಾದಿ ದಾವಾ ಎ ಶೆಡ್ಯೂಲ್ ಆಸ್ತಿಯ ಕ್ರಯ ಪತ್ರ ಮಾಡಿಕೊಡುವಂತೆ 1 ಮತ್ತು 2 ನೇ ಪ್ರತಿವಾದಿಗೆ ನಿ.ಪಿ.7 ರಂತೆ ನೋಟಿಸ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಧ್ಯವಾದರೆ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಈ ದಾವೆಯಲ್ಲಿ ಸುಳ್ಳು ಸಾಧನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ಈ ಹಿಂದೆ ದಾವಾ ಎ ಶೆಡ್ಯೂಲ್ ಆಸ್ತಿಯಲ್ಲಿ ಮನೆ ಕಟ್ಟಡ ಇತ್ತು ಎಂದರೆ ಸರಿ. ಸದ್ರಿ ಕಟ್ಟಡ ಈಗ ಬಿದ್ದು ಹೋಗಿದೆ ಎಂದರೆ ಸರಿ. ನಿ.ಪಿ.6 ರ ಷರತ್ತಿನಂತೆ ವಾದಿಗೆ ದಾವಾ ಎ ಶೆಡ್ಯೂಲ್ ಆಸ್ತಿಯ ಕುರಿತು ಸಹ ನಾವು ಕ್ರಯ ಪತ್ರ ಬರೆದುಕೊಡಲು ಬದ್ದರು ಎಂದು ತಿಳಿದ್ದರು ಸಹ ವಾದಿಗೆ ಮೋಸ ಮಾಡಲು ಸುಳ್ಳು ಸಾಧನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ಈ ದಾವೆಯಲ್ಲಿ ನಿವೃತ್ತಿ ಕೇಳುವ ಅಧಿಕಾರ ಇದೆ ಎಂದು ಗೊತ್ತಿದ್ದರು ಸುಳ್ಳು ಸಾಧನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ದಾವೆಯಲ್ಲಿ ವಾದಿ ಹೇಳಿಕೊಂಡ ವಿಚಾರಗಳು ಯಾವುದೆ ಗೊತ್ತಿಲ್ಲದಿದ್ದರೂ ಸುಳ್ಳು ಸಾದೆನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ**